**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ**
**ರಾಷ್ಟ್ರೀಯ ಸೇವಾ ಯೋಜನೆ**

ಸಂ: ಡಿಟಿಇ/ಎನ್‌ಎಸ್‌ಎಸ್/16/ಎಸ್.ವಿ(1)/2012-13

ಸಂಯೋಜನಾಧಿಕಾರಿ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01,
ದಿನಾಂಕ: 04-01-2020

**ಸುತ್ತೋಲೆ**

ವಿಷಯ: ಸ್ವಾಮಿ ವಿವೇಕಾನಂದ ಜನ್ಮದಿನಾಚರಣೆಯ ಅಂಗವಾಗಿ ದಿನಾಂಕ: 12-01-2020 ರಂದು ರಾಜ್ಯದಲ್ಲಿ **"ಸ್ವಾಮಿ ವಿವೇಕಾನಂದ ಜಯಂತಿ "** ಆಚರಣೆ ಕುರಿತು.

ಉಲ್ಲೇಖ: 1) ಸರ್ಕಾರದ ಉಪ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ (ವಿಶ್ವ ವಿದ್ಯಾಲಯಗಳು) ಇವರ ಪತ್ರ ಸಂಖ್ಯೆ: ಇಡಿ 250ಯುಎನ್‌ಇ 2019, ದಿನಾಂಕ:03-01-2020

2) ಇಲಾಖೆಯ ಪತ್ರ ಸಂಖ್ಯೆ: DTE/TEQIP/SPIU/CR-1/2018-19 DATED 31-12-2019

*****

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿರುವ ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ/ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು **ದಿನಾಂಕ: 12-01-2020** ರಂದು ಸ್ವಾಮಿ ವಿವೇಕಾನಂದರ ಜೀವನ ತತ್ವ ಮತ್ತು ಸಂದೇಶಗಳನ್ನು ಯುವಕರಿಗೆ ತಲುಪಿಸುವ ನಿಟ್ಟಿನಲ್ಲಿ ಸ್ತಬ್ಧ ಚಿತ್ರಗಳು ಮತ್ತು ಸೂಕ್ತಿಗಳನ್ನು ಪ್ರದರ್ಶಿಸುವ ಫಲಕಗಳನ್ನೊಳಗೊಂಡ ಜಾಥ ಹಮ್ಮಿಕೊಳ್ಳುವುದು.

ಸ್ವಾಮಿ ವಿವೇಕಾನಂದರ ಕುರಿತು, ಸಾಂಸ್ಕೃತಿಕ ಕಾರ್ಯಕ್ರಮ, ನುರಿತ ವಾಗ್ಮಿಗಳಿಂದ ಭಾಷಣ ಮತ್ತು ವಿದ್ಯಾರ್ಥಿಗಳಿಗೆ ಚರ್ಚಾ ಗೋಷ್ಠಿ, ಗೋಡೆ ಬರಹ, ಪ್ರಬಂಧ ಸ್ಪರ್ದೆಗಳನ್ನು ಆಯೋಜಿಸುವುದು. ಉಲ್ಲೇಖ (2) ರಲ್ಲಿ ತಿಳಿಸಿದಂತೆ ಯುವ ಸಬಲಿಕರಣ ಕೇಂದ್ರಗಳನ್ನು ಉದ್ಘಾಟಿಸಿ ಕಾರ್ಯರೂಪಕ್ಕೆ ತರುವುದು. ಸದರಿ ಮಾಹಿತಿಯನ್ನು ನಿರ್ದೇಶನಾಲಯದ ಎನ್.ಎಸ್.ಎಸ್ ಕೋಶಕ್ಕೆ nssdte@gmail.com ಗೆ ಕಳುಹಿಸಲು ಸೂಚಿಸಲಾಗಿದೆ.

ನಿರ್ದೇಶಕರು,

ಪ್ರತಿ:

1) ಸರ್ಕಾರದ ಉಪ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ (ವಿಶ್ವ ವಿದ್ಯಾಲಯಗಳು) ಬೆಂಗಳೂರು ಇವರ ಮಾಹಿತಿಗಾಗಿ
2) ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ/ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಮತ್ತು - ಸೂಕ್ತ ಕ್ರಮಕ್ಕಾಗಿ
3) ಇ-ಆಡಳಿತ ಅಂತರ್‌ಜಾಲ ತಾಣದಲ್ಲಿ ಪ್ರಕಟಿಸಲು
4) ಕಛೇರಿ ಕಡತ